# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕೋರಮಂಗಲ ಉಪ-ವಿಭಾಗದ ಜಕ್ಕಸಂದ್ರ ವಾರ್ಡ್ ಸಂಖ್ಯೆ-173 ದಿನಾಂಕ: 31-07-2021 ರಂದು ಜುಲೈ-2021 ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ ಸಂಜೀವ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173ರ ರವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಕಟ್ಟಡ, ಉದ್ಯಾನವನ ಹತ್ತಿರ, ಹೆಚ್.ಎಸ್.ಆರ್. 5ನೇ ಸೆಕ್ಟರ್, ಜಕ್ಕಸಂದ್ರ, (ಜಕ್ಕಸಂದ್ರ ವಾರ್ಡ್ ಕಛೇರಿ, ಬಿ.ಬಿ.ಎಂ.ಪಿ) ಬೆಂಗಳೂರು ದಿನಾಂಕ: 31.07.2021 ರಂದು ಬೆಳಗ್ಗೆ 11.30 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದವರು:-**

1. ಶ್ರೀ ಎಂ.ಕೆ.ಎಸ್. ಆಚಾರ್ಯ
2. ಶ್ರೀ ಎಂ.ಎ. ಪೊನ್ನಪ್ಪ
3. ಶ್ರೀ ಎಲ್.ವಿ. ಹೆನ್ರಿ
4. ಶ್ರೀಮತಿ ಸರಸ್ವತಿ
5. ಶ್ರೀ ಸಜೀ ಜಾರ್ಜ್

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-173 ಜಕ್ಕಸಂದ್ರ
2. ಶ್ರೀ ಕರಿಯಪ್ಪ, ಕಂದಾಯ ವಸೂಲಿಗಾರರು, ಬಿ.ಬಿ.ಎಂ.ಪಿ.
3. ಶ್ರೀ ಬಸವರಾಜ್ .ಎಸ್. ಹಾದಿಮಣಿ, ಬೆಸ್ಕಾಂ
4. ಶ್ರೀ ಜನಾರ್ಧನ .ಬಿ, ಬೆಸ್ಕಾಂ
5. ಶ್ರೀ ಜಗದೀಶ್ .ಎಸ್, ಹೆಚ್.ಎಸ್.ಆರ್. ಟ್ರಾಫಿಕ್
6. ಶ್ರೀ ದೇವರಾಜು, ಎ.ಎಸ್.ಐ., ಮಡಿವಾಳ ಪೊಲೀಸ್ ಠಾಣೆ,
7. ಶ್ರೀ ನರಸಿಂಹ, ಎಸ್.ಡಬ್ಲ್ಯೂ.ಎಂ, ಮೇಲ್ವಿಚಾರಕರು, ಬಿ.ಬಿ.ಎಂ.ಪಿ.

* * * * *

ಶ್ರೀ ಸಂಜೀವ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ಹೆಚ್.ಎಸ್.ಆರ್ 5ನೇ ಹಂತದ 11ನೇ ಮುಖ್ಯರಸ್ತೆಗೆ ಡಾಂಬರು ಹಾಕುವ ಕಾಮಗಾರಿಯು ತುಂಬಾ ಸಮಯಗಳಿಂದ ಬಾಕಿ ಉಳಿದಿದ್ದು, ರಸ್ತೆಯು ದೂಳಿನಿಂದ ಕೂಡಿದ್ದು, ಹಳೆಯ ಕಾಂಕ್ರೀಟ್ ಹಾಳಾಗಿದ್ದ ಬಗ್ಗೆ ಸಭೆಗೆ ತಿಳಿಸಲಾಗಿ ಸಹಾಯಕ ಅಭಿಯಂತರರು ವಾರ್ಡ್-173 ರವರು ಹಾಲಿ ಕಾಮಗಾರಿಯು ಅನುಮೋದನೆಗೊಂಡಿದ್ದು, ಕೂಡಲೇ ಕಾಮಗಾರಿ ಪ್ರಾರಂಭಿಸುವುದಾಗಿ ತಿಳಿಸಿದರು.



Scanned by CamScanner

ಸರ್ಜಾಪುರ ರಸ್ತೆಗೆ ಸಂಪರ್ಕಿಸುವ 3ನೇ ಮುಖ್ಯರಸ್ತೆಯ ಮೂಲೆ ನಿವೇಶನದಲ್ಲಿ ಕಸ ಸುರಿದು ರಸ್ತೆಯಲ್ಲಿ ಸಂಚರಿಸುವವರಿಗೆ ವಾಸನೆ ಬರುತ್ತಿರುತ್ತದೆ ಹಾಗೂ ಸ್ಥಳೀಯ ನಿವಾಸಿಗಳಿಗೂ ಇದರಿಂದ ಬಹಳ ತೊಂದರೆಯಾಗುತ್ತಿರುತ್ತದೆ. ಕಸ ಎಸೆಯುವುದನ್ನು ತಡೆಯಲು ಬಿ.ಬಿ.ಎಂ.ಪಿ. ಗಮನಕ್ಕೆ ತರಲಾಯಿತು. ಈ ಬಗ್ಗೆ ಕ್ರಮವಹಿಸಲು ಹಿರಿಯ ಆರೋಗ್ಯ ನಿರೀಕ್ಷಕರು ರವರಿಗೆ ಸಭೆಯಲ್ಲಿ ಸೂಚಿಸಲಾಯಿತು.

ಫಾಗಿಂಗ್ ಮತ್ತು ಸ್ಪ್ರೇಯಿಂಗ್ ಅನ್ನು ಆರೋಗ್ಯ ಇಲಾಖೆಯ ಕಡೆಯಿಂದ ಮಾಡುತ್ತಿದ್ದು, ಇತ್ತೀಚಿನ ಒಂದು ತಿಂಗಳಿನಿಂದ ಫಾಗಿಂಗ್ ಮತ್ತು ಸ್ಪ್ರೇಯಿಂಗ್ ಅನ್ನು ಸರಿಯಾಗಿ ಮಾಡುತ್ತಿಲ್ಲದಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಗಿದ್ದು, ಈ ಬಗ್ಗೆ ಕ್ರಮವಹಿಸಲು ಸೂಚಿಸಲಾಯಿತು.

ಕ್ರಮ: ಹಿರಿಯ ಆರೋಗ್ಯ ನಿರೀಕ್ಷಕರು
ಆರೋಗ್ಯ ಇಲಾಖೆ (ಬಿ.ಟಿ.ಎಂ. ಲೇಔಟ್)

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಸದಸ್ಯ ಕಾರ್ಯದರ್ಶಿ ಮತ್ತು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

31/07/2021
(ಶ್ರೀ. ಪ್ರದೀಪ್ ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್-173 ಜಕ್ಕಸಂದ್ರ

31.07.2021
(ಶ್ರೀ ಸಂಜೀವಕುಮಾರ್)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್-173 ಜಕ್ಕಸಂದ್ರ



Scanned by CamScanner



Scanned by CamScanner



Scanned by CamScanner